ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಈ ಜನತೆ ಕೇಳತಕ್ಕಂತಹ ಕಷ್ಟಕ್ಕೆ ಸ್ಪಂದಿಸದೆ ಇರತಕ್ಕಂಥಾದ್ದು ಬಹಳ ಕಠೋರವಾದ ವಿಚಾರ. ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಇದನ್ನು ಪ್ರತಿಭಟನೆ ಮಾಡಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(The Hon'ble Member withdrew from the House).

ANNOUNCEMENT

MR.DEPUTY SPEAKER : I Welcome the Chairman and Members of the Committee on Printing of Textbooks and modernisation of the Government Press of Andhra Pradesh Assembly who are witnessing the proceedings of the House from the Speaker's Gallery.

ಅಧ್ಯಕ್ಷರ ಅಪ್ಪಣೆ ಮೇರೆಗ

ಜಿಲ್ಲಾ ಹಾಗೂ ಮಂಡಲ್ ಪಂಚಾಯತಿ, ಚುನಾವಣೆಗೆ ತಾತ್ಕಾಲಿಕವಾಗಿ ದಿನಗೂಲಿ ಆಧಾರದ ಮೇಲೆ ನೇಮಿಸಿಕೊಂಡಿರುವ ಬೆರಳಚ್ಚು ನೌಕರರನ್ನು ಮುಂದುವರಿಸುವ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉಪ ಸಭಾಧ್ಯಕ್ಷರೆ, ಹಿಂದೆ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ಚುನಾವಣೆಗೆ ತಾತ್ಕಾಲಿಕವಾಗಿ ನೇಮಿಸಿದ ಬೆರಳಚ್ಚುಗಾರರನ್ನು ದಿನಗೂಲಿ ಆಧಾರದ ಮೇಲೆ ಭರ್ತಿ ಮಾಡುವ ಆದೇಶವನ್ನು ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಡಿಪಿಎಆರ್ 61, ಇಷಿಪ 80 ದಿನಾಂಕ 6.11.96ಕ್ಕೆ ಮಾಡಿತ್ತು. ಪ್ರಸ್ತುತ ಅವರ ಸೇವೆಯನ್ನು ಮುಂದುವರೆಸುವುದು, ಈಗ 12ವರ್ಷಗಳ ನಿರಂತರ ಸೇವೆಯನ್ನು ಅವರು ಪೂರೈಸಿದ್ದಾರೆ. ಕರ್ನಾಟಕ ಸರ್ಕಾರ ದಿನಗೂಲಿ ನೌಕರರನ್ನು 10 ವರ್ಷದ ನಿರಂತರ ಸೇವೆಯನ್ನು ಪೂರೈಸಿದವರಿಗೆ ಸಕ್ರಮಗೊಳಿಸಬೇಕೆಂದು ಸರ್ಕಾರದ ಆದೇಶ ಇತ್ತು. ಈ ತನಕ ಸುಮಾರು 10.12 ವರ್ಷಗಳಿಗಿಂತ ಹೆಚ್ಚಿಗೆ ನಿರಂತರ ಸೇವೆ ಮಾಡಿ ನೌಕರರನ್ನು ಇನ್ನು ಕಾಯಂ ಮಾಡಿಲ್ಲ. ಸರ್ಕಾರ ತಕ್ಷಣ ಇದರ ಬಗ್ಗೆ ಒಂದು ಆದೇಶ ಹೊರಡಿಸಿ ಆ ಎಲ್ಲಾ ದಿನಗೂಲಿ ನೌಕರರಿಗೆ ಕಾಯಂ ಮಾಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಈ ಬೆರಳಚ್ಚುಗಾರರನ್ನು ಚುನಾವಣೆಯ ಸಂದರ್ಭದಲ್ಲಿ ತಾತ್ಕಾಲಿಕ ಹುದ್ದೆಯಲ್ಲಿ ನೇಮಕ ಮಾಡಿಕೊಂಡಿದ್ದರು. ಅವರು ನೇರವಾಗಿ ನೇಮಕ ಮಾಡಿಕೊಂಡವರು ಅಲ್ಲ. ಆದ್ದರಿಂದ ಇಂತಹ ಯಾವ ಪ್ರಸ್ತಾಪ ಮತ್ತು ಕ್ರಮಬದ್ಧತೆ ಮಾಡಿಕೊಳ್ಳತಕ್ಕಂತಹ ವಿಷಯಗಳೂ ಕೂಡ ನಮ್ಮ ಇಲಾಖೆಯ ಮುಂದೆ ಇಲ್ಲ. ಆದರೆ ಮಾನ್ಯ ಶಾಸಕರು ಈ ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ಇದನ್ನು ಚುನಾವಣಾ ಆಯೋಗಕ್ಕೆ ಈ ವಿಚಾರವನ್ನು ಕಳುಹಿಸಿಕೊಟ್ಟು ಅವರು ದಿನಗೂಲಿ ಆಧಾರದ ಮೇಲೆ 12 ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡಿದ್ದರೆ ಸುಪ್ರೀಂ ಕೋರ್ಟಿನ ಆದೇಶದನ್ವಯ ಮತ್ತು ನಮ್ಮ ಡಿಪಿಎಆರ್ ಆದೇಶದನ್ವಯ ಕಳುಹಿಸಿಕೊಡುತ್ತೇನೆ.